# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ : 170/2015

**ಪಿಡಬ್ಲೂ : 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ : 03-02-2020 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದ :

ದಾವಾಆಸ್ತಿಯನ್ನು ಯಾವ ಆಧಾರದ ಮೇಲೆ ನಮ್ಮ ಪಿತ್ರಾರ್ಜಿತವಾದ ಆಸ್ತಿ ಅಂತ ನೀವು ಹೇಳಿರುತ್ತೀರಿ ಅಂದರೆ ದಾವಾಆಸ್ತಿಯ ಪಾಲುಪಟ್ಟಿ ಮತ್ತು ಪಹಣಿಪತ್ರಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತಿದ್ದವು ಹಾಗಾಗಿ ಪಿತ್ರಾರ್ಜಿತ ಆಸ್ತಿ ಅಂತ ಹೇಳುತ್ತಿದ್ದೇನೆ. ನಿಮ್ಮ ತಂದೆಯ ಹೆಸರಿಗೆ ಯಾವ ದಾಖಲಾತಿಗಳು ಇರುತ್ತವೆ ಅಂದರೆ ಪಹಣಿಪತ್ರಗಳು ಮತ್ತು ರಜಿಸ್ಟರ ಪತ್ರದಲ್ಲಿ ನಮೂದು ಆಗಿರುತ್ತವೆ. ಆ ಪಹಣಿಪತ್ರಗಳು ಮತ್ತು ರಜಿಸ್ಟರ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಹೌದು. ನಿಮ್ಮ ತಂದೆಯ ಹಸೆರಿಗೆ ಇರುವ ರಜಿಸ್ಟರ ಪತ್ರಗಳಾಗಲಿ ಅಥವಾ ಪಹಣಿಪತ್ರಗಳಾಗಲಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೂ ನೀವು ಸುಳ್ಳು ಹೇಳುತ್ತಿದ್ದೀರಾ ಅಂದರೆ ಸರಿಯಲ್ಲ. ಆ ರಜಿಸ್ಟರ ಪತ್ರಗಳು ಮತ್ತು ಪಹಣಿ ಪತ್ರಗಳು ನಿಮ್ಮ ಮನೆಯಲ್ಲಿ ಇರುತ್ತವಾ ಅಂದರೆ ಹೌದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲವೆಂದರೆ ಅವುಗಳನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಮತ್ತು ಮನೆಯಲ್ಲಿ ಕೂಡಾ ಇರುತ್ತವೆ ಮನೆಯಲ್ಲಿ ಇರುವುದು ಜೆರಾಕ್ಸ ಪ್ರತಿಗಳು.

ನಿಮ್ಮ ತಂದೆಯಿಂದ ದಾವಾಆಸ್ತಿಯು ಯಾವ ಆಧಾರದ ಮೇಲೆ ನಿಮಗೆ ಬಂದಿರುತ್ತದೆ ಅಂದರೆ ಪಾಲುಪಟ್ಟಿಯ ಆಧಾರದ ಮೇಲೆ ಬಂದಿರುತ್ತದೆ. ಆ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಹೌದು. ಆ ಪಾಲುಪಟ್ಟಿ ರಜಿಸ್ಟರ ಅಥವಾ ನೊಂದಣಿಯಾಗದ ಪಾಲುಪಟ್ಟಿಯಾ ಅಂದರೆ ನೊಂದಣಿ ಆಗದ ಪಾಲುಪಟ್ಟಿ. ಆ ರೀತಿ ತಾವು ಯಾವುದೇ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಮೂಲಪತ್ರವು ಎಲ್ಲಿ ಇರುತ್ತದೆ ಅಂದರೆ ನಮ್ಮ ಅಣ್ಣನ ಮನೆಯಲ್ಲಿ ಇರುತ್ತದೆ. ಜೆರಾಕ್ಸ ಪ್ರತಿಯನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಅದೇರೀತಿ ಆ ಪಾಲುಪಟ್ಟಿಯಲ್ಲಿ ದಾವಾಆಸ್ತಿಗೆ ಸಂಬಂಧಿಸಿದಂತೆ ಚೆಕ್ಕುಬಂದಿಯನ್ನು ಬರೆಯಲಾಗಿರುತ್ತದಾ ಅಂದರೆ ಇಲ್ಲ. ಆ ಪಾಲುಪತ್ರವನ್ನು ಎಷ್ಟನೇ ಇಸ್ವಿಯಲ್ಲಿ ಬರೆಯಲಾಯಿತು ಅಂದರೆ 1998 ರಲ್ಲಿ ಬರೆಯಲಾಗಿದೆ. 1998 ರಲ್ಲಿ ಆದ ಪಾಲುಪಟ್ಟಿಯ ಆಧಾರದ ಮೇಲೆ ದಾವಾಆಸ್ತಿಯಲ್ಲಿ ನನಗೆ ಹಕ್ಕು ಮತ್ತು ಅಧಿಕಾರ ಇರುತ್ತದೆ ಎಂದು ಈ ದಾವೆಯನ್ನು

ಹಾಕಿರುತ್ತೇನೆ ಅಂದರೆ ಸರಿ. 1998 ನೇ ಸಾಲಿನಲ್ಲಿ ಯಾವ ದಿನಾಂಕ ಮತ್ತು ತಿಂಗಳಿನಂದು ಪಾಲುಪಟ್ಟಿಯಾಗಿರುತ್ತದೆ ಎಂದು ನನಗೆ ನೆನಪಿಲ್ಲ. 1998 ರಲ್ಲಿ ಆ ಪಾಲುಪಟ್ಟಿಯ ಆಧಾರದ ಮೇಲೆ ಮ್ಯುಟೇಶನ ಬದಲಾಯಿಸಲು ಅರ್ಜಿಯನ್ನು ಕೊಟ್ಟಿರುತ್ತೀರಾ ಅಂದರೆ ಇಲ್ಲ ಯಾವಾಗ ಕೊಟ್ಟಿರುತ್ತೀರಿ ಅಂದರೆ ನೆನಪಿಲ್ಲ. ಪಾಲುಪಟ್ಟಿಯಾದ ಒಂದು ವರ್ಷ ಅಥವಾ ಎರಡು ವರ್ಷ ನಂತರದಲ್ಲಿ ಮ್ಯುಟೇಶನ ಬದಲಾಯಿಸಲು ಕೊಟ್ಟಿರುತ್ತೀರಾ ಅಂದರೆ ನೆನಪಿಲ್ಲ. ಮ್ಯುಟೇಶನಗೆ ಕೊಟ್ಟೆ ಮತ್ತು ನನ್ನ ಹೆಸರಿಗೆ ದಾವಾಆಸ್ತಿ ಬಂದಿರುತ್ತದೆ ಎಂದು ನಿಮ್ಮ ವಾದ ಪತ್ರದಲ್ಲಿ ಬರೆಸಿರುತ್ತೀರಾ ಅಂದರೆ ನನಗೆ ನೆನಪಿಲ್ಲ. ವಾದಪತ್ರವನ್ನು ಹಾಕಲು ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಅಂದರೆ ನಾನೇ ಕೊಟ್ಟಿರುತ್ತೇನೆ. ಮಾಹಿತಿ ಕೊಡುವ ಸಂದರ್ಭದಲ್ಲಿ 1998 ರ ಪಾಲುಪಟ್ಟಿಯ ಪ್ರತಿಯನ್ನು ಕೊಟ್ಟು ಈ ದಾವೆಯನ್ನು ಹಾಕಿಸಿರುತ್ತೇನೆ ಅಂದರೆ ಸರಿ. ನೀವು ಮತ್ತು ನಿಮ್ಮ ಅಣ್ಣ ಸೇರಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಶಾದಿಮಹಲ್‌ಗೋಸ್ಕರ ಒಂದು ಆಸ್ತಿಯನ್ನು ಬರೆದುಕೊಟ್ಟಿರುತ್ತೀರಿ ಅಂದರೆ ಸರಿ. ಆ ಆಸ್ತಿಯು ನನ್ನ ಅಣ್ಣನ ಮಗಳಾದ (ಪ್ರತಿವಾದಿ ನಂ : 01 ರವರ) ಮನೆಯ ಪೂರ್ವ ದಿಕ್ಕಿಗೆ ಇರುತ್ತದೆ ಅಂದರೆ ಸರಿ. ಅಲ್ಲಿ ಕರ್ನಾಟಕ ರಾಜ್ಯ ಸರ್ಕಾರರವರು ಶಾದಿಮಹಲ್ ನಿರ್ಮಾಣ ಮಾಡಿರುತ್ತಾರೆ ಅಂದರೆ 2002 ರಲ್ಲಿ ಶಾದಿಮಹಲ್‌ನ್ನು ನಿರ್ಮಾಣ ಮಾಡಿರುತ್ತಾರೆ. ಆ ಶಾದಿಮಹಲ್‌ನ್ನು ಕರ್ನಾಟಕ ರಾಜ್ಯ ಸರ್ಕಾರದವರು ನೀವು ಮತ್ತು ನಿಮ್ಮ ಅಣ್ಣ ಬರೆದುಕೊಟ್ಟ ಚೆಕ್ಕುಬಂದಿಯಲ್ಲಿಯೇ ನಿರ್ಮಾಣ ಮಾಡಿರುತ್ತಾರೆ ಅಂದರೆ ಇಲ್ಲ. ಹಾಗಾದರೆ ಆ ಶಾದಿಮಹಲ್ ಎಲ್ಲಿ ಇರುತ್ತದೆ ಅಂದರೆ ನನ್ನ ಮತ್ತು ನನ್ನ ಅಣ್ಣನ ಆಸ್ತಿಯ ಮದ್ಯದಲ್ಲಿ ಇರುತ್ತದೆ ಸಾಕ್ಷಿಗೆ ಪುನಃ ಅಂದರೆ ದಾವಾಆಸ್ತಿಯ ಮದ್ಯದಲ್ಲಿ ಶಾದಿಮಹಲ್ ಇರುತ್ತದೆ ಅಂದರೆ ಹೌದು. ಈ ಶಾದಿಮಹಲ್ ನಿಮ್ಮ ದಾವಾಆಸ್ತಿಯಲ್ಲಿ ಇದೆ ಅಂತ ನಿಮಗೆ ಯಾವಾಗ ಗೊತ್ತಾಯಿತು ಅಂದರೆ ಕಟ್ಟುವ ಸಮಯದಲ್ಲಿ ಗೊತ್ತಾಗಿರುತ್ತದೆ. 2012 ರಲ್ಲಿ ಗೊತ್ತಾಗಿರುತ್ತದೆಯೇ ಅಂದರೆ 2002 ರಲ್ಲಿಯೇ ಗೊತ್ತಾಗಿರುತ್ತದೆ ಆಗ ಪಹಣಿಗಳು ಜಂಟಿಯಾಗಿದ್ದವು. ಆ ಸಮಯದಲ್ಲಿ ನೀವು ತಕರಾರು ಮಾಡಿರುತ್ತೀರಾ ಅಂದರೆ ನಾನು ತಕರಾರು ಮಾಡಿಲ್ಲ (ಸಾಕ್ಷಿಯು ಮುಂದುವರೆದು ನಮ್ಮ ಕೆಲವೊಂದು ಆಸ್ತಿಗಳು ಅಂದರೆ ಮನೆಯು ನಮ್ಮ ತಂದೆಯ ಹೆಸರಿಗೆ ಇತ್ತು ಅದು ನನ್ನ ಹೆಸರಿಗೆ ಬದಲಾಗ ಬೇಕಾಗಿತ್ತು ಅದಕ್ಕೆಲ್ಲಾ ನನ್ನ ಅಣ್ಣನ ಒಪ್ಪಿಗೆ ಸಹಿ ಬೇಕಾಗಿತ್ತು ಆತನ ಸಹಿಗೋಸ್ಕರ ನಾನು ಆತ ಹೇಳಿದಕ್ಕೆಲ್ಲಾ ಒಪ್ಪಿಕೊಳ್ಳಬೇಕಾಗಿತ್ತು . 1998 ನೇ ಸಾಲಿನಲ್ಲಿಯೇ ನಿಮ್ಮ ಮತ್ತು ನಿಮ್ಮ ಅಣ್ಣನ ಮದ್ಯದಲ್ಲಿ ಆಸ್ತಿಗಳ ವ್ಯವಹಾರ ಮುಗಿದುಹೋಗಿತ್ತು ಅಂದರೆ ಆದರೆ ಮನೆಯನ್ನು ಆ ಪಾಲುಪಟ್ಟಿಯಲ್ಲಿ ತೋರಿಸಿರಲಿಲ್ಲ. ಈ ದಾವೆಯನ್ನು ಹಾಕಿದಾಗಲೂ ಆ ಶಾದಿಮಹಲ್ ಅಲ್ಲೇ ಇರುತ್ತದೆ ಅಂದರೆ ಸರಿ. ಆ ಶಾದಿಮಹಲ್ ಅನ್ನು ಅಥವಾ ಕರ್ನಾಟಕ ರಾಜ್ಯ ಸರ್ಕಾರದವರನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಾ ಅಂದರೆ ಇಲ್ಲ. ನಿಮ್ಮ ಹೆಸರಿಗೆ ದಾವಾಆಸ್ತಿ

ಆದನಂತರ ನನ್ನ ದಾವಾಆಸ್ತಿಯಲ್ಲಿ ಶಾದಿಮಹಲ್‌ನ್ನು ಕಟ್ಟಿ ಸರ್ಕಾರದವರು ಅತಿಕ್ರಮಣ ಮಾಡಿರುತ್ತಾರೆ ಎಂದು ಈ ಬಗ್ಗೆ ನೀವು ಸರಿ ಮಾಡಿ ಕೊಡಬೇಕೆಂದು ರಾಜ್ಯಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟಿರುತ್ತೀರಾ ಅಂದರೆ ಕೊಟ್ಟಿರುತ್ತೇನೆ ಆ ಅರ್ಜಿಯನ್ನು ಕೊಟ್ಟಿರುವ ಬಗ್ಗೆ ಮತ್ತು ಶಾದಿಮಹಲ್ ಇರುವ ಬಗ್ಗೆ ನಿಮ್ಮ ವಾದಪತ್ರದಲ್ಲಿ ಹೇಳಿರುತ್ತೀರಾ ಅಂದರೆ ಇಲ್ಲ. ಈ ದಾವಾಆಸ್ತಿಯಲ್ಲಿ ಶಾದಿಮಹಲ್ ಅಸ್ತಿತ್ವದಲ್ಲಿ ಇದ್ದ ಬಗ್ಗೆ ಅರ್ಜಿಯನ್ನು ಕೊಟ್ಟಿರುವ ಬಗ್ಗೆ ವಿಚಾರವಾಗಿ ನೀವು ಈ ದಾವೆಯನ್ನು ಯಾಕೆ ಕಾಣಿಸಿಲ್ಲವೆಂದರೆ ಅದರ ಬಗ್ಗೆ ನಾನು ಡಿಸಿ ಮತ್ತು ಎಸಿ ಅವರ ಬಳಿಯಲ್ಲಿ ಪ್ರತ್ಯೇಕವಾಗಿ ಅರ್ಜಿಯನ್ನು ಕೊಟ್ಟಿರುತ್ತೇನೆ. ಆ ಅರ್ಜಿ ಹಾಕಿರುವ ಬಗ್ಗೆ ನ್ಯಾಯಾಲಯಕ್ಕೆ ಸ್ವೀಕೃತ ಪತ್ರವನ್ನು ಹಾಕಿರುತ್ತೀರಾ ಅಂದರೆ ಇಲ್ಲ. ಅವು ನಿಮ್ಮ ಮನೆಯಲ್ಲಿ ಇರುತ್ತವೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲವೆಂದರೆ ಸರಿ. 02ನೇ ಪ್ರತಿವಾದಿಯ ಆಸ್ತಿಯ ಪೂರ್ವ ದಿಕ್ಕಿಗೂ ಸಹ ಶಾದಿಮಹಲ್ ಬರುತ್ತದೆ ಅಂದರೆ ಸರಿ. 01 ಮತ್ತು 02 ನೇ ಪ್ರತಿವಾದಿಗಳ ಆಸ್ತಿಗಳ ಯಾವ ದಿಕ್ಕಿನಲ್ಲಿ ನಿಮ್ಮ ಆಸ್ತಿ ಬರುತ್ತದೆ ಅಂದರೆ 02ನೇ ಪ್ರತಿವಾದಿಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಹಾಗೂ 01 ನೇ ಪ್ರತಿವಾದಿಯ ಉತ್ತರ ದಿಕ್ಕಿಗೆ ನನ್ನ ಆಸ್ತಿ ಬರುತ್ತದೆ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿರುತ್ತಾರೆ ಅನುಮತಿ ಮೇರೆಗೆ ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್ ಎಸ್ ಜೆ
ಪ್ರ.ದ.ಸ.